Termination of Services of Labourers in Karnataka Veeners Limited Kundur (Akkunji) in Siddapur Taluk.

269. SRI U. B. BORKAR (Sirsi).—Will the Minister for Labour and Excise be pleased to state :—

(*a*) whether it has come to the notice of Government that the services of about 400 labourers working in Karnataka Veeners Ltd., Kundr (Akkunji) in Siddapur Taluk are being terminated ;

(*b*) whether it is a fact that the labourers residing around the factory are facing threat of starvation ;

(*c*) the reasons why their services are being terminated ?

SRI R. S. PATIL (Minister for Labour and Excise)

(*a*) No.

(*b*) No.

(*c*) Does not arise in view of replies to clause (*a*) and (*b*).

ಶ್ರೀ ಯು. ಬಿ. ಬೋರ್‌ಕರ್.—ನನ್ನ (ಅ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದೀರಿ. ಆದರೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ೪-೧೦-೧೯೭೭ರಂದು ಮತ್ತು ೧೬-೧೦-೧೯೭೮ರಂದು ೨ ಪತ್ರಗಳನ್ನು ಬರೆಯಲಾಗಿದೆ. ಆ ಪತ್ರಗಳಲ್ಲಿ, ತಾವು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಕೊಟ್ಟಂತ ಪಟ್ಟಿಯಲ್ಲಿರುವ ಹೆಸರುಗಳನ್ನು ಎಕ್ಸ್‌ಟ್ರಾಕ್ಟ್ ಮಾಡಿಕೊಂಡು ಈಗಾಗಲೇ ಇರತಕ್ಕ ಕಾರ್ಮಿಕರನ್ನು ತೆಗೆದು ಹಾಕಬೇಕಂದೂ, ಒಂದು ವೇಳೆ ತೆಗೆದುಹಾಕದೆ ಮೊದಲ ಒಂದು ಪತ್ರಕ್ಕೆ ಮಾನ್ಯತೆ ಕೊಡದಿದ್ದರೆ ತಲಾ ೨೦೦ ರೂಪಾಯಿ ದಂಡವನ್ನು ಹಾಗೂ ಎರಡನೇ ಪತ್ರಕ್ಕೆ ಮಾನ್ಯತೆ ಕೊಡದಿದ್ದರೆ ತಲಾ ೨೦೦೦ ರೂಪಾಯಿ ದಂಡವನ್ನು ಹಾಕಲಾಗುವುದೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

† ಶ್ರೀ ಆರ್. ಎಸ್. ಪಾಟೀಲ್.—ತಾವು ಏನು ೪೦೦ ಜನರನ್ನು ತೆಗೆದು ಹಾಕಿದ್ದಾರೆಂದು ಹೇಳಿದ್ದೀರಿ ಇದಕ್ಕೆ ಇಲ್ಲ ಎಂದು ಉತ್ತರ ಕೊಡಲಾಗಿದೆ. ಅಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಹೆಸರನ್ನು ಕರೆಯದೆ ೨೦ ಜನರನ್ನು ತೆಗೆದುಕೊಂಡಿದ್ದರಿಂದ ನಿಯಮ ಬಾಹಿರವಾಗಿದೆ ಎಂದು ಎಂಪ್ಲಾಯ್‌ಮೆಂಟ್ ಆಫೀಸರ್ ತಿಳಿಸಿ ಈ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಅಪೀಲು ಮಾಡಿಕೊಂಡಿದ್ದಾರೆ. ಒಟ್ಟು ಅಲ್ಲಿರುವವರು ಕೇವಲ ೫೬ ಜನವಾದ್ದರಿಂದ ತಾವು ಹೇಳುತ್ತಿರುವ ೪೦೦ ಜನರ ಪ್ರಶ್ನೆ ಬರುವುದಿಲ್ಲ ; ಯಾರಾದರು ತಮಗೆ ತಪ್ಪು ಕಲ್ಪನೆ ಕೊಟ್ಟಿರಬಹುದು.

ಶ್ರೀ ಯು. ಬಿ. ಬೋರ್‌ಕರ್.—ಸ್ಥಳೀಯ ಕಾರ್ಮಿಕರ ಬಗ್ಗೆ ಈ ಪ್ರಶ್ನೆ ಇದೆ.

ಶ್ರೀ ಆರ್. ಎಸ್. ಪಾಟೀಲ್.—ಸ್ಥಳೀಯ ಕಾರ್ಮಿಕರನ್ನು ತೆಗೆದುಕೊಂಡಿರುವುದು ೪-೧೧-೭೭ರಲ್ಲಿ. ಫ್ಯಾಕ್ಟರಿ ಬಿಲ್ಡಿಂಗಿನ ಕನ್‌ಸ್ಟ್ರಕ್ಷನ್ನಿನ ಸಲುವಾಗಿ ಅಲ್ಲಿನ ಕಂಟ್ರಾಕ್ಟರು ಸುತ್ತಮುತ್ತ ಹಳ್ಳಿಯ ಅನೇಕ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಕೆಲಸ ಪೂರ್ತಿಯಾದ ಮೇಲೆ ಅವರನ್ನು ತೆಗೆದುಹಾಕಿದರು.

ಶ್ರೀ ಯು. ಬಿ ಬೋರ್‌ಕರ್.—ತಾವು ಹೇಳುತ್ತಿರುವುದು ಸತ್ಯಕ್ಕೆ ದೂರವೆನಿಸುತ್ತದೆ. ಅವರು ಕೆಲಸ ಮಾಡಿದರು ನಿಜ. ಈಗ ಅವರನ್ನು ಮುಂದುವರಿಸಿಕೊಂಡು ಹೋಗುತ್ತೀರಾ ? ಈ ಕ್ಯಾಷುಯಲ್ ಲೇಬರ್ಸ್ ಏನಿದ್ದಾರೆ ಇವರು ಇವತ್ತು ಬರುತ್ತಾರೆ. ನಾಳೆ ಹೋಗುತ್ತಾರೆ. ಇಂಥ ಕಾರ್ಮಿಕರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮುಖೇನ ತೆಗೆದುಕೊಂಡು ಮುಂದುವರಿಸಿಕೊಂಡು ಹೋಗುವುದಕ್ಕೆ ಕಾಯಿದೆಯಲ್ಲಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಎಸ್ ಪಾಟೀಲ್.—ಅಲ್ಲಿ ೪೦೦ ಜನರ ವಿಚಾರ ಬರುವುದಿಲ್ಲ ಅಲ್ಲಿರುವವರು ಕೇವಲ ೫೬ ಜನ. ೨೦ ಜನರನ್ನು ಏಕೆ ನಮ್ಮನ್ನು ಕೇಳದೆ ತೆಗೆದುಕೊಂಡಿರಿ ಎಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರು ಕೇಳಿದ್ದಾರೆ. ಈ ಒಂದು ಸಾರಿ ಇರುವವರನ್ನು ರೆಗ್ಯುಲರೈಸ್ ಮಾಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಯಾರನ್ನೂ ತೆಗೆದುಹಾಕಲಿಲ್ಲ.

ಶ್ರೀಮತಿ ಅನಸೂಯ ಶರ್ಮ.—ಆ ಕಾರ್ಮಿಕರಿಗೆ ಎಷ್ಟು ಸಂಬಳವನ್ನು ಫಿಕ್ಸ್ ಮಾಡಿದ್ದಾರೆ ?

ಶ್ರೀ ಆರ್. ಎಸ್. ಪಾಟೀಲ್.—ಅವರಿಗೆ ಫ್ಯಾಕ್ಟರಿಯಲ್ಲಿ ಏನು ಸಂಬಳ ಕೊಡುತ್ತಾರೋ ಅಷ್ಟೇ ಕೊಡುತ್ತಾರೆ. ಅದು ಎಷ್ಟೆಂಬ ಬಗ್ಗೆ ತಮಗೆ ವಿವರಣೆ ಬೇಕಾದರೆ ತರಿಸಿಕೊಡುತ್ತೇನೆ.

Hogenakal Hydro-Electric Project

609. SRI P. RAMDEV (Malleswaram).—Will the Minister of State for Information and Youth Services be pleased to state ;

(*a*) whether the Government intends to take up Hogenakal Hydro-Electric project ;

(*b*) the stage of the project ;

(*c*) whether the Government has taken investigation work of this project ?

SRI K.H. SRINIVASA (Minister of State for Information and Youth Services).—

(*a*) Government of Karnataka has plans to take up Power Development Projects in the Cauvery Basin without detriment to the State's interests.

(*b*) and (*c*) Detailed investigations in this regard are being carried out.

ಶ್ರೀ ಪಿ. ರಾಮದೇವ್.—ತಾವು ರಾಜ್ಯದ ಹಿತಾಶಕ್ತಿಗಳನ್ನು ಕಾಪಾಡಲು ಏನು ಕ್ರಮ ಕೈಗೊಂಡಿದ್ದೀರಿ ಮತ್ತು ಯಾವ ಯಾವ ಯೋಜನೆಗಳನ್ನು ಪಾಕಿಕೊಂಡಿದ್ದೀರಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಮ್ಮ (ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದ ಹಿತಾಶಕ್ತಿಗಳಿಗೆ ಧಕ್ಕೆ ಭಾರದ ಹಾಗೆ ವಿದ್ಯುತ್ ಯೋಜನೆಗಳನ್ನು ಕೈಗೊಳ್ಳತಕ್ಕ ಉದ್ದೇಶ ಸರ್ಕಾರಕ್ಕೆ ಇದೆಯೆಂದೂ ಹಾಗೂ (ಇ) ಪ್ರಶ್ನೆಗೆ ಉತ್ತರವಾಗಿ ಆ ಬಗ್ಗೆ ವಿವರವಾದ ತನಿಖೆಗಳನ್ನು ನಡೆಸಲಾಗುತ್ತಿದೆ ಎಂದು ಹೇಳಲಾಗಿದೆ. ಅದು ಇನ್ನೂ ನಡೆಯುತ್ತಿರುವುದರಿಂದ ಎಲ್ಲ ವಿವರಗಳನ್ನು ಈ ಸಂದರ್ಭದಲ್ಲಿ ಒದಗಿಸತಕ್ಕದ್ದು ಸಾಧ್ಯವಿಲ್ಲ. ಇನ್ನೊಂದು ಪ್ರಶ್ನೆಯ ಬಗ್ಗೆ ಅನೇಕ ಬಾರಿ ಸ್ಪಷ್ಟಪಡಿಸಿದಂತೆ ಕಾವೇರಿ ಬೇಸಿನ್‌ನಲ್ಲಿ ನಾವು ಯಾವುದೇ ಯೋಜನೆಯನ್ನು ತೆಗೆದುಕೊಳ್ಳಬೇಕಾದರೂ ಕೂಡ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಒಂದು ಅಗತ್ಯವಾದ ತೀರ್ಮಾನವಾಗಬೇಕಾಗಿರುವುದರಿಂದ ಯಾವುದೇ ಯೋಜನೆಯನ್ನು ಸಿದ್ಧಪಡಿಸಿದರೂ ಕೂಡ ಅದು ನಮ್ಮ ನಮ್ಮ ಊಹಾಪೋಹದ ಮೇಲೆ ಸಿದ್ಧಪಡಿಸಿದಂತಾಗುವುದರಿಂದ ಈ ಸಂದರ್ಭದಲ್ಲಿ ಈ ಬಗ್ಗೆ ಚರ್ಚೆ ಮಾಡಿದರೂ ಕೂಡ ಅದರಿಂದ ಯಾವುದೇ ಉದ್ದೇಶ ನೆರವೇರುವುದಿಲ್ಲವಾದ್ದರಿಂದ ಈಗ ಆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಯೋಜನೆ ನಮ್ಮ ಸರ್ಕಾರಕ್ಕೆ ಸಂಬಂಧಪಡುವುದಿಲ್ಲವೆಂದು ನನ್ನ ತಿಳುವಳಿಕೆ. ಇದು ತಮಿಳ್ನಾಡು ಸರ್ಕಾರಕ್ಕೆ ಸಂಬಂಧಪಟ್ಟದ್ದಾದ್ದರಿಂದ ನಮ್ಮ ಸರ್ಕಾರ ಯಾವ ರೀತಿಯ ಯೋಜನೆಯನ್ನು ತಯಾರಿಸತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಲ್ಲಿ ಆ ಪ್ರಶ್ನೆ ಇಲ್ಲ. ತಾವು ಹೇಳತಕ್ಕದ್ದು ಈ ಯೋಜನೆಯನ್ನು ನಾವು ಮಾಡತಕ್ಕದ್ದಲ್ಲ, ಇದು ತಮಿಳ್ನಾಡಿಗೆ ಸಂಬಂಧಿಸಿದ್ದು ಎಂದು. ಆದರೆ ಕಾವೇರಿ ಪ್ರದೇಶದಲ್ಲಿ ವಿದ್ಯುತ್ ಉತ್ಪಾದನೆಯ ಸಲುವಾಗಿ ನಮ್ಮ ಯೋಜನೆಗಳು ಇವೆ ಎಂದು ನಾವು ತಿಳಿಸಿದ್ದೇವೆ.